ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER : ಸಂಯುಕ್ತ ಕರ್ನಾಟಕ    ದಿನಾಂಕ : DATE : 27/08/2019

# ಸಿದ್ದರಾಮಯ್ಯ ಗೌರವಸ್ಥ

27-8-19

**ಸಂ.ಕ. ಸಮಾಚಾರ ಕೋಲಾರ**

ಸಮ್ಮಿಶ್ರ ಸರ್ಕಾರ ಬೀಳಲು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರಣ ಎಂಬುದು ಸರಿಯಲ್ಲ. ಅವರೊಬ್ಬ ನೇರವಾದ ದೊಡ್ಡ ಮನುಷ್ಯ, ಏಕಪಾಜಿ ವ್ಯಕ್ತಿ, ಹಾಗೆಲ್ಲ ತಪ್ಪು ಮಾಡುವ ಮನುಷ್ಯನಲ್ಲ, ಜನಪರ ಮತ್ತು ಬಡವರ ಬಗ್ಗೆ ಕಾಳಜಿ ಇರುವಂತಹ ಗೌರವಸ್ಥ ಎಂದು ಮಾಜಿ ಸ್ಪೀಕರ್ ರಮೇಶ್‌ಕುಮಾರ್ ಬಣ್ಣಿಸಿದರು.



ಸರ್ಕಾರ ಬೀಳಲು ನಾನೂ ಕಾರಣ ಎಂದು ಮಾಜಿ ಪ್ರಧಾನಿ ದೇವೇಗೌಡರು ಆರೋಪಿಸಿರುವ ವಿಚಾರ ನನಗೆ ಗೊತ್ತಿಲ್ಲ. ನನಗಿಂತ ದೊಡ್ಡವರು ಟೀಕಿಸಿದರೆ ನನಗೆ ಅದು ಆಶೀರ್ವಾದ ಎಂದು ಭಾವಿಸುವೆ, ಕಿರಿಯರು ಟೀಕಿಸಿದರೆ ಅವರಿಗೆ ಆಶೀರ್ವಾದ ಮಾಡುವೆ ಎಂದು ತಿಳಿಸಿದರು.

ಆರೋಗ್ಯ ಸಚಿವರಾಗಿದ್ದ ಸಂದರ್ಭದಲ್ಲಿನ ಪ್ರಕರಣಗಳಿಗೆ ಸಂಬಂಧಿಸಿದಂತೆ ತಮ್ಮನ್ನು ಯಾರಾದರೂ ಟಾರ್ಗೆಟ್ ಮಾಡಿಕೊಂಡರೆ ಮಾಡಿಕೊಳ್ಳಲಿ ಬಿಡಿ, ಅವರಿಗೆ ಒಳ್ಳೆಯದಾಗಲಿ, ನನಗೇನೂ ತೊಂದರೆಯಿಲ್ಲ, ನಾನೊಬ್ಬ ಸಣ್ಣ ಮನುಷ್ಯ, ನನ್ನನ್ನು ಟಾರ್ಗೆಟ್ ಮಾಡಿದರೆ ಏನು ಸಿಗುತ್ತೆ, ಜನರ ಮಧ್ಯೆ ಇದ್ದು ಹುಚ್ಚನಂತೆ ಮಾತನಾಡುವುದೇ ನನ್ನ ಕೆಲಸ ಎಂದರು.